(ಮಾನ್ಯ ಸದಸ್ಯರಾದ ಶ್ರೀ ಯು.ಕೆ. ಶಾಮಣ್ಣನವರು ಗೈರು ಹಾಜರಾಗಿದ್ದರು)

೩) ಬೆಂಗಳೂರು ಡೈರಿಗೆ ಅರ್ಧ ಲೀಟರ್ ಹಾಲಿನ ಪ್ಯಾಕೆಟ್‌ಗಳ ಸರಬರಾಜು ಮಾಡುವ ಬಗ್ಗೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ:- ಕೆಲವು ತಿಂಗಳುಗಳಿಂದ ಬೆಂಗಳೂರು ನಗರದಲ್ಲಿ ಅರ್ಧ ಲೀಟರ್ ಹಾಲಿನ ಪ್ಯಾಕೆಟ್‌ಗಳನ್ನು ಸಾಕಷ್ಟು ಪ್ರಮಾಣದಲ್ಲಿ ಸರಬರಾಜು ಮಾಡುತ್ತಿಲ್ಲ. ಇದರಿಂದ ಏಜೆಂಟರು ಗ್ರಾಹಕರುಗಳಿಗೆ ಅರ್ಧ ಲೀಟರ್ ಹಾಲನ್ನು ಒದಗಿಸಲು ಕಷ್ಟವಾಗಿದೆ. ಒಂದು ಲೀಟರ್ ಪ್ಯಾಕೆಟ್‌ನ್ನು ಒಡೆದು ಅರ್ಧಲೀಟರ್ ಗ್ರಾಹಕರಿಗೆ ಕೊಡುವಾಗ ಸಾಕಷ್ಟು ಹಾಲು ಸೋರಿಹೋಗುತ್ತದೆ. ಇದರ ಜೊತೆಗೆ ತೂತಾಗಿರತಕ್ಕ ಹಾಲಿನ ಪ್ಯಾಕೆಟ್‌ಗಳನ್ನು ಸಹ ಸರಬರಾಜು ಮಾಡಲಾಗುತ್ತಿದೆ. ಆದ್ದರಿಂದ ಕೂಡಲೇ ಅರ್ಧಲೀಟರ್ ಹಾಲಿನ ಪ್ಯಾಕೆಟ್‌ಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಒದಗಿಸಲು ಹಾಗೂ ತೂತಾಗಿರತಕ್ಕಂಥ ಹಾಲಿನ ಪ್ಯಾಕೆಟ್‌ಗಳನ್ನು ಏಜೆಂಟರುಗಳಿಗೆ ಸರಬರಾಜು ಮಾಡದಂತೆ ಕ್ರಮ ಕೈಗೊಳ್ಳಬೇಕೆಂದು ಸನ್ಮಾನ್ಯ ಪಶುಸಂಗೋಪನಾ ಸಚಿವರನ್ನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೆ, ಪ್ರಸ್ತುತ ಬೆಂಗಳೂರು ಡೇರಿಯು ದಿನಂಪ್ರತಿ ೩.೧೦ ಲಕ್ಷ ಲೀಟರ್ ಹಾಲನ್ನು ಮಾರಾಟ ಮಾಡುತ್ತಿದೆ. ಇದರಲ್ಲಿ ೨,೪೫,೦೦೦ ಲೀಟರ್ ಹಾಲನ್ನು ೧ ಲೀಟರ್ ಪ್ಯಾಕೆಟ್‌ಗಳಲ್ಲಿ ಮತ್ತು ೬೫,೦೦೦ ಲೀಟರ್ ಹಾಲನ್ನು ಅರ್ಧಲೀಟರ್ ಪ್ಯಾಕೆಟ್‌ಗಳಲ್ಲಿ ಮಾರಾಟ ಮಾಡಲಾಗುತ್ತಿದೆ. ಆದರೆ ಅರ್ಧಲೀಟರ್‌ನ ೫೦,೦೦೦ ಪ್ಯಾಕೆಟ್‌ಗಳನ್ನು ಪ್ಯಾಕ್ ಮಾಡಿ ವಿತರಿಸಲಾಗುತ್ತಿದೆ.

ಪ್ರಸ್ತುತ ಬೆಂಗಳೂರು ಡೇರಿಯ ಹಾಲು ಸಂಸ್ಕರಣಾ ಸಾಮರ್ಥ್ಯವು ದಿನಂಪ್ರತಿ ೧.೫ ಲಕ್ಷ ಲೀಟರ್ ಇದ್ದು, ದಿನಂಪ್ರತಿ ೩.೧೦ ಲಕ್ಷ ಲೀಟರ್ ಹಾಲನ್ನು ಸಂಸ್ಕರಿಸಿ ವಿತರಿಸುತ್ತಿದೆ. ಬೆಂಗಳೂರು ಡೇರಿಯ ಸಾಮರ್ಥ್ಯದ ವಿಸ್ತರಣಾ ಕೆಲಸವು ಪೂರ್ಣಗೊಂಡ ನಂತರ ಅರ್ಧ ಲೀಟರ್ ಪ್ಯಾಕೆಟ್‌ಗಳ ಸರಬರಾಜಿಗೆ ಇರುವ ಬೇಡಿಕೆಯನ್ನು ಪೂರ್ಣವಾಗಿ ಈಡೇರಿಸಲು ಡೇರಿಗೆ ಸಾಧ್ಯವಾಗುತ್ತದೆ. ಈಗಾಗಲೇ ನಾನು ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇನೆ. ೫೦ ಸಾವಿರ ಪ್ಯಾಕೆಟ್ಸ್ ಏನಿದೆ ಅದನ್ನು ಒಂದು ಲಕ್ಷ ಪ್ಯಾಕೆಟ್ಸ್ ಮಾಡುವಂತೆ ಆದೇಶ ಕೊಟ್ಟಿದ್ದೇನೆ. ನವೆಂಬರ್ ೯ರಿಂದ ಬೆಂಗಳೂರು ನಗರಕ್ಕೆ ಅರ್ಧಲೀಟರ್ ಹಾಲಿನ ಪ್ಯಾಕೆಟ್ಸ್ ಸಂಪೂರ್ಣ ಪೂರೈಸಲು ಕ್ರಮ ಕೈಗೊಳ್ಳಲಾಗುವುದು.

೪) ಉಳ್ಳಾಲ:- ಸೋಮೇಶ್ವರದ ಮಧ್ಯದಲ್ಲಿ ಪ್ರವಾಸೋದ್ಯಮ ಕೇಂದ್ರ.

ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ):- ಮಾನ್ಯ ಅಧ್ಯಕ್ಷರೆ, ರಾಜ್ಯದ ಕರಾವಳಿಯಲ್ಲಿ ಉಳ್ಳಾಲ ಅತ್ಯಂತ ಸುಂದರ ತಾಣ. ಪಡುಕಡಲಿನ ಪ್ರಶಾಂತ ವಾತಾವರಣದಲ್ಲಿ ಪ್ರಕೃತಿಯ ಸೌಂದರ್ಯದಿಂದ ಇಲ್ಲಿಗೆ ವಿಶೇಷವಾದಂಥ ಸನ್ಮಾನ. ಪೋರ್ಚುಗೀಸರೊಡನೆ ಹೋರಾಡಿದ ಧೀರ ಮಹಿಳೆ ಅಬ್ಬಕ್ಕ ರಾಣಿಯ ಧೀಮಂತ ಪ್ರದೇಶ. ಈ ಪರಿಸರಕ್ಕೆ ಬಂದ ಪ್ರವಾಸಿಗಳಿಗೆ ಇಲ್ಲಿ ಸದಾ ಆನಂದದ ಆವೇಶ. ಸಾವಿರಾರು ಪ್ರವಾಸಿಗಳು, ಭಕ್ತರು ಸಯದ್ ಮದನಿ ದರ್ಗಕ್ಕೆ ಪ್ರತಿದಿನವೂ ಬರುತ್ತಿರುವ ಮನಮೋಹಕ ಸನ್ನಿವೇಶ. ದೇವಾಲಯಗಳು, ಚರ್ಚ್‌ಗಳು ಇರುವ ಆಕರ್ಷಣೀಯ ಪ್ರದೇಶ. ಉಳ್ಳಾಲ-ಸೋಮೇಶ್ವರದ ಮಧ್ಯದಲ್ಲಿ ಪ್ರವಾಸೋದ್ಯಮ ಕೇಂದ್ರ ತೆರೆಯಲು ಅನೇಕ ವರ್ಷಗಳಿಂದ ನಮ್ಮ ಬೇಡಿಕೆ. ನ್ಯಾಯಯುತ ಬೇಡಿಕೆ ಇನ್ನೂ ಈಡೇರದೆ ಇರುವುದರಿಂದ ಪುನಃ ಪುನಃ ಅದೇ ನಮ್ಮ ಕೇಳಿಕೆ. ಉಳ್ಳಾಲದಂಥ ಸರ್ವಾಂಗ ಸುಂದರ ರಮಣೀಯ ಸಮುದ್ರ ತೀರದಲ್ಲಿ ಪ್ರವಾಸೋದ್ಯಮ ಕೇಂದ್ರದ ಮಂಜೂರಾತಿ ಮಾಡಲಾರಿರಾ? ಬಹುದಿನಗಳ ಈ ಭಾಗದ ಜನರ ಆಸೆಯನ್ನು ಪೂರೈಸಲಾರಿರಾ? ಪ್ರವಾಸೋದ್ಯಮ ಮಂತ್ರಿಗಳು ಇಲ್ಲಿಗೆ ಭೇಟಿ ಕೊಡಬೇಕೆಂದು ಕೇಳುತ್ತಿದ್ದೇನೆ. ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೆ, ಮಂಗಳೂರಿನ ಸಮೀಪದಲ್ಲಿರುವ ಉಲ್ಲಾಳ-ಸೋಮೇಶ್ವರ ಕಡಲ ತೀರಗಳು ಪ್ರಕೃತಿ ಸೌಂದರ್ಯದಿಂದ ಕೂಡಿದೆ. ಕ್ರಿ.ಶ. ೧೬೦೦ರಲ್ಲಿ ಪೋರ್ಚುಗೀಸರನ್ನು ಸೋಲಿಸಿದ ರಾಣಿ ಅಬ್ಬಕ್ಕ ಆಳಿದ ಸ್ಥಳ ಇದಾಗಿದೆ. ಉಲ್ಲಾಳರ ಸಯ್ಯದ್ ಮದನಿ ದರ್ಗಕ್ಕೆ ಹಾಗೂ ಸೋಮೇಶ್ವರದಲ್ಲಿರುವ ಪುರಾತನ ದೇವಾಲಯಕ್ಕೆ ಯಾತ್ರಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಇಲ್ಲಿನ ಸೊಬಗನ್ನು ಸವಿಯುತ್ತಾರೆ.

ಉಲ್ಲಾಳ-ಸೋಮೇಶ್ವರದ ಬಗ್ಗೆ ಪ್ರವಾಸಿಗರಿಗೆ ಮಾಹಿತಿ ಒದಗಿಸಲು, ಮಂಗಳೂರಿನಲ್ಲಿ ಪ್ರವಾಸಿ ಮಾಹಿತಿ ಕೇಂದ್ರವನ್ನು ಇಲಾಖೆ ತೆರೆದಿದೆಯಲ್ಲದೆ ಇಲಾಖೆ ಹೊರತಂದಿರುವ ಕರಾವಳಿ ಬಣ್ಣದ ಕಿರುಹೊತ್ತಿಗೆಯಲ್ಲಿ ಉಲ್ಲಾಳ-ಮತ್ತು ಸೋಮೇಶ್ವರದ ಬಗ್ಗೆ ಮಾಹಿತಿ ಒದಗಿಸಲಾಗಿದೆ.

ಪ್ರೇಕ್ಷಣೀಯ ಸ್ಥಳಗಳ ಅಭಿವೃದ್ಧಿಯಲ್ಲಿ ಖಾಸಗಿ ಉದ್ಯಮಿಗಳನ್ನು ತೊಡಗಿಸುವುದು ಸರ್ಕಾರದ ನೀತಿಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಈ ಪ್ರೇಕ್ಷಣೀಯ ಸ್ಥಳಗಳನ್ನು ಇತ್ತೀಚೆಗೆ ಘೋಷಿಸಲಾದ ಕರ್ನಾಟಕ ಪ್ರವಾಸೋದ್ಯಮ ನೀತಿಯಲ್ಲಿ 'ಸಿ' ಗುಂಪಿನಡಿಯಲ್ಲಿ ಸೇರಿಸಿದ್ದು ಇಲ್ಲಿ ಪ್ರವಾಸೋದ್ಯಮ ಯೋಜನೆಗಳನ್ನು ಕೈಗೊಳ್ಳಲು ಮುಂದೆ ಬರುವ ಖಾಸಗಿ ಉದ್ಯಮಿಗಳಿಗೆ ಬಂಡವಾಳ ಹೂಡಿಕೆ ಮೇಲೆ ಹೆಚ್ಚಿನ ಸಬ್ಸಿಡಿ, ರಿಯಾಯಿತಿ ಮತ್ತು ಉತ್ತೇಜನಗಳನ್ನು ನೀಡಲಾಗುವುದು.

೫) ವಿಷಯ:- ಕಬ್ಬಿಗೆ ಸಲಹಾ ಬೆಲೆಯನ್ನು ನಿಗದಿಪಡಿಸುವ ಬಗ್ಗೆ

ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):- ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದ ಬಹುತೇಕ ಸಕ್ಕರೆ ಕಾರ್ಖಾನೆಗಳು ಕಬ್ಬನ್ನು ಅರೆಯುವ ಕಾರ್ಯವನ್ನು ಸಮಾಪ್ತಿಗೊಳಿಸುವ ಹಂತದಲ್ಲಿದ್ದು, ೧೯೯೨-೯೩ನೇ ಸಾಲಿಗೆ ಇನ್ನೂ ಸಹ ರಾಜ್ಯ ಸರ್ಕಾರದ ಕನಿಷ್ಠ ಸಲಹಾ ಬೆಲೆಯು ರೈತರು ಬೆಳೆದ ಕಬ್ಬಿಗೆ ನಿಗದಿಯಾಗಿದೆ, ರೈತರ ಹಣ ಪಾವತಿಯ ಬಗ್ಗೆ ತುಂಬಾ ಸಮಸ್ಯೆಯಾಗಿದೆ. ರೈತರು ಈ ಬಗ್ಗೆ ತೀವ್ರ ಚಿಂತನೆಗೆ ಒಳಗಾಗಿದ್ದಾರೆ. ಆದ್ದರಿಂದ ರಾಜ್ಯ ಸರ್ಕಾರವು ತುರ್ತಾಗಿ ಕಬ್ಬಿಗೆ ಕನಿಷ್ಠ ಸಲಹಾ ಬೆಲೆಯನ್ನು ನಿಗದಿಪಡಿಸಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಬಿ.ಎಸ್. ಪಾಟೀಲ್ (ಸಕ್ಕರೆ ಸಚಿವರು):- ಮಾನ್ಯ ಅಧ್ಯಕ್ಷರೆ, ಭಾರತ ಸರ್ಕಾರವು ಪ್ರತಿ ವರ್ಷ ಶೇಕಡ ೮೫ರಷ್ಟು ರಿಕವರಿಗೆ ಅನುಗುಣವಾಗಿ ಕಬ್ಬಿನ ಬೆಳೆಯ ಶಾಸನ ಬದ್ಧ ಕನಿಷ್ಠ ದರವನ್ನು ಪ್ರಕಟಿಸುತ್ತದೆ. ಆದರೆ, ಈ ವರ್ಷ ಸ್ವಲ್ಪ ವಿಳಂಬವಾಗಿ ನಿನ್ನೆ ತಾನೇ ಭಾರತ ಸರ್ಕಾರವು ಶಾಸನಬದ್ಧ ಕನಿಷ್ಠ ದರವನ್ನು ೧೯೯೨-೯೩ನೇ ಸಾಲಿಗೆ ಹಾಗೂ ೧೯೯೩-೯೪ನೇ ಸಾಲಿಗೆ ಮತ್ತು ಸಕ್ಕರೆ ನೀತಿಯನ್ನು ಪ್ರಕಟಿಸಿದೆ.

ಈ ಮಧ್ಯೆ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ ೨೯-೧೨-೯೨ ರಂದು ೧೯೯೨-೯೩ನೇ ಸಾಲಿನ ಕಬ್ಬಿನ ಬೆಳೆಗೆ ರಾಜ್ಯ ಸಲಹಾ ದರವನ್ನು ನಿಗದಿಪಡಿಸಲು ಸಭೆಯನ್ನು ಜರುಗಿಸಲಾಯಿತು. ಕಬ್ಬು ಬೆಳೆಗಾರರ ಪ್ರತಿನಿಧಿಗಳು, ಸಕ್ಕರೆ ಕಾರ್ಖಾನೆಗಳ ಪ್ರತಿನಿಧಿಗಳು ಮತ್ತು ರಾಜ್ಯ ಸರ್ಕಾರದ ಅಧಿಕಾರಿಗಳು ಸದರಿ ಸಭೆಯಲ್ಲಿ ಭಾಗವಹಿಸಿದ್ದರು. ಮಾನ್ಯ ಮುಖ್ಯಮಂತ್ರಿಗಳ ಅಪೇಕ್ಷೆಯಂತೆ ಕಬ್ಬು ಬೆಳೆಗಾರರ ಪ್ರತಿನಿಧಿಗಳು ಸಕ್ಕರೆ ಕಾರ್ಖಾನೆಗಳ ಪ್ರತಿನಿಧಿಗಳು, ವಿಧಾನಸಭೆಯ ಸದಸ್ಯರುಗಳು ಮತ್ತು ಲೋಕಸಭಾ ಸದಸ್ಯರನ್ನೊಳಗೊಂಡಂತೆ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಒಂದು ಉಪ ಸಮಿತಿಯನ್ನು ರಚಿಸಲಾಯಿತು. ಸದರಿ ಉಪ ಸಮಿತಿಯ ಶಿಫಾರಸ್ಸುಗಳನ್ನು ಹಾಗೂ ಭಾರತ ಸರ್ಕಾರದ ಸಕ್ಕರೆ ನೀತಿಯನ್ನು ಮತ್ತು ಶಾಸನಬದ್ಧ ಕನಿಷ್ಠ ದರವನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಸರ್ಕಾರವು ಸದ್ಯದಲ್ಲಿಯೇ ೧೯೯೨-೯೩ನೇ ಸಾಲಿಗೆ ರಾಜ್ಯ ಸಲಹಾ ದರವನ್ನು ಪ್ರಕಟಿಸುವುದು.